# ಕುವೆಂಪು ವಿಶ್ವವಿದ್ಯಾಲಯ

## ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡಾವಳಿಗಳು

**ಸಭಾ ದಿನಾಂಕ : 15-11-2022**

**ಪ್ರಾಧಿಕಾರಗಳ ವಿಭಾಗ**
ಜ್ಞಾನಸಹ್ಯಾದ್ರಿ, ಶಂಕರಘಟ್ಟ 577 451
ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್: drsyndicateku@gmail.com

☎08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1:ಎ.ಸಿ.04-22:394:2022-23 ದಿನಾಂಕ:06-12-2022

ಮಾನ್ಯರೆ,

ವಿಷಯ:ದಿನಾಂಕ:15-11-2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

...

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-IIರ ಪ್ರಕರಣ- 17ರನ್ವಯ ದಿನಾಂಕ:15-11-2022ರಂದು ವಿಶ್ವವಿದ್ಯಾಲಯದ **"ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"**ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-IIರ ಪ್ರಕರಣ- 17ರ ಕಂಡಿಕೆ (2) ರ ಪ್ರಕಾರ ಸದರಿ ನಡಾವಳಿಗಳನ್ನು ಕಳುಹಿಸಿದ 21 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

ಪ್ರತಿಗಳು:-

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು,ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,/ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
11) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
13) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು. ಕುವೆಂಪು ವಿಶ್ವವಿದ್ಯಾಲಯ
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ.
18) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
19) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
20) ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:15-11-2022 ರಂದು ಮಂಗಳವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ **"ಪ್ರೊ.ಎಸ್.ಪಿ. ಹಿರೇಮಠ್ ಸಭಾಂಗಣ"**ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಬಿ.ಪಿ ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 3. | ಪ್ರೊ. ನವೀನ್ ಕುಮಾರ್ ಎಸ್.ಕೆ. ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ವಿನಯ ಕುಮಾರ್ ಶೆಟ್ಟಿ ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಎ.ಟಿ. ಪದ್ಮೇಗೌಡ ಪ್ರಾಂಶುಪಾಲರು | ಸದಸ್ಯರು |
| 7. | ಡಾ. ವಿಷ್ಣುಮೂರ್ತಿ ಕೆ.ಎ. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀಮತಿ ಭಾರತಿ ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ನಟೇಶ ಎಸ್.ಎಂ. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಬಿ.ಸಿ. ಬಸವರಾಜಪ್ಪ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಮಹಾಲಿಂಗಪ್ಪ ಈ. ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಎಂ. ಸ್ವಾಮಿ ಪ್ರಾಂಶುಪಾಲರು | ಸದಸ್ಯರು |
| 13. | ಶ್ರೀ ಹೆಚ್.ಎಂ. ಸುರೇಶ್. ಪ್ರಾಂಶುಪಾಲರು | ಸದಸ್ಯರು |
| 14. | ಶ್ರೀ ಚಂದ್ರಶೇಖರ ಎಸ್. | ಸದಸ್ಯರು |
| 15. | ಶ್ರೀ ಎಂ.ಎ. ರಮೇಶ್ ಹೆಗಡೆ | ಸದಸ್ಯರು |
| 16. | ಶ್ರೀಮತಿ ಗೀತಾಂಜಲಿ | ಸದಸ್ಯರು |
| 17. | ಶ್ರೀಮತಿ ಮಮತಾ ಸಾಲಿ | ಸದಸ್ಯರು |
| 18. | ಶ್ರೀ ಮನೋಜ್ ಸಲ್ದಾನಾ | ಸದಸ್ಯರು |
| 19. | ಶ್ರೀ ಕುಮಾರೇಗೌಡ | ಸದಸ್ಯರು |
| 20. | ಡಾ. ರವಿಕಿರಣ ಹೆಚ್.ಕೆ. | ಸದಸ್ಯರು |
| 21. | ಶ್ರೀ ಶಿವಣ್ಣ ಪಿ. | ಸದಸ್ಯರು |
| 22. | ಡಾ. ನರಸಿಂಹಮೂರ್ತಿ ಎಸ್.ಕೆ., ಪ್ರಾಧ್ಯಾಪಕರು | ಸದಸ್ಯರು |
| 23. | ಡಾ. ಪದ್ಮಮ್ಮ ಎಸ್. ಪ್ರಾಧ್ಯಾಪಕರು | ಸದಸ್ಯರು |
| 24. | ಡಾ. ಆರ್ಕೋಟ ನಾಯಕ ವೈ., ಪ್ರಾಧ್ಯಾಪಕರು | ಸದಸ್ಯರು |
| 25. | ಪ್ರೊ. ರಿಯಾಜ್ ಮಹಮೂದ್ ಡೀನರು., ವಿಜ್ಞಾನ ನಿಕಾಯ | ಸದಸ್ಯರು |
| 26. | ಪ್ರೊ. ವೆಂಕಟೇಶ್ ಎಸ್, ಡೀನರು., ವಾಣಿಜ್ಯ ನಿಕಾಯ | ಸದಸ್ಯರು |
| 27. | ಡಾ. ಗೀತಾ ಸಿ., ಡೀನರು., ಶಿಕ್ಷಣ ನಿಕಾಯ | ಸದಸ್ಯರು |
| 28. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 29. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 30. | ಡಾ. ಜಿ. ಪ್ರಶಾಂತ್ ನಾಯಕ., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 31. | ಡಾ. ಎನ್.ಡಿ. ವಿರೂಪಾಕ್ಷ (ಪ್ರಭಾರ), ನಿರ್ದೇಶಕರು, ದೈಹಿಕ ಶಿಕ್ಷಣ | ಸದಸ್ಯರು |
| 32. | ಶ್ರೀ ಎಸ್. ರಾಮಕೃಷ್ಣ, ಹಣಕಾಸು ಅಧಿಕಾರಿಗಳು | ಸದಸ್ಯರು |
| 33. | ಪ್ರೊ. ನವೀನ್ ಕುಮಾರ್ ಎಸ್.ಕೆ. ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ ಆಹ್ವಾನಿತರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ಶ್ರೀ ಎಸ್. ರುದ್ರೇಗೌಡ, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ | ಸದಸ್ಯರು |
| 3. | ಶ್ರೀಮತಿ ಸೀಮಾ ಕೌಸರ್, ಹೆಚ್. ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀಮತಿ ಎಸ್.ಬಿ. ಅನುಪಮ | ಸದಸ್ಯರು |
| 5. | ಡಾ. ಎಸ್. ಚಂದ್ರಶೇಖರ್, ಪ್ರಾಧ್ಯಾಪಕರು | ಸದಸ್ಯರು |
| 6. | ಡಾ. ಕೆ.ಎಂ. ಮಹಾದೇವನ್ ಪ್ರಾಧ್ಯಾಪಕರು | ಸದಸ್ಯರು |
| 7. | ಪ್ರೊ. ವೈ.ಎಲ್. ರಾಮಚಂದ್ರ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, | ಸದಸ್ಯರು |
| 8. | ಪ್ರೊ. ವೈ.ಎಲ್. ಕೃಷ್ಣಮೂರ್ತಿ. ನಿರ್ದೇಶಕರು ಐ.ಕ್ಯೂ.ಎ.ಸಿ | ವಿಶೇಷ ಆಹ್ವಾನಿತರು |

**ಪ್ರಸ್ತಾವನೆ:**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರಿಗೆ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು ಹಾಗೂ ವಿದ್ಯಾವಿಷಯಕ ಪರಿಷತ್‌ಗೆ ನೂತನವಾಗಿ ನಾಮನಿರ್ದೇಶನಗೊಂಡ **ಶ್ರೀ ಹೆಚ್.ಎಂ. ಸುರೇಶ್**. ಪ್ರಾಂಶುಪಾಲರು, ಎ.ಟಿ.ಎನ್.ಸಿ.ಸಿ. ಕಾಲೇಜು, ಶಿವಮೊಗ್ಗ ಇವರಿಗೆ ಸಭೆಯ ಪರವಾಗಿ ಸ್ವಾಗತ ಕೋರಿದರು.

ನಂತರ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಮಾತನಾಡಿ ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯು ಇಂದಿನ ನೂತನ ಮಾಹಿತಿ ತಂತ್ರಜ್ಞಾನ ಮತ್ತು ಸ್ಪರ್ಧಾತ್ಮಕ ಸಂದರ್ಭದಲ್ಲಿ ಬಹಳ ಮಹತ್ವವಾಗಿದೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಮೂಲಕ ಸಿದ್ಧಪಡಿಸಲಾಗಿರುವ ಸ್ನಾತಕ 3 ಮತ್ತು 4ನೇ ಪಠ್ಯಕ್ರಮವನ್ನು ಅನುಮೋದಿಸಬೇಕಾಗಿರುವ ಹಿನ್ನೆಲೆಯಲ್ಲಿ ವಿದ್ಯಾವಿಷಯಕ ಪರಿಷತ್ ಸಭೆಯನ್ನು ಕರೆಯಲಾಗಿರುತ್ತದೆ. ಆದ್ದರಿಂದ ಸಭೆಯಲ್ಲಿ ಭಾಗವಹಿಸಿರುವ ಸದಸ್ಯರು ಈ ಕುರಿತು ಸಕ್ರಿಯವಾಗಿ ಚರ್ಚಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕೋರಿದರು. ನಂತರ ಕುಲಸಚಿವರಿಗೆ ಸಭೆಯನ್ನು ಆರಂಭಿಸಲು ತಿಳಿಸಿದರು.

## ಕಾರ್ಯಸೂಚಿ

ಪ್ರಾರಂಭದಲ್ಲಿ ಮಾತನಾಡಿದ ಮಾನ್ಯ ಕುಲಸಚಿವರು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಮೂಲಕ ಸಿದ್ಧಪಡಿಸಲಾಗಿರುವ ಪದವಿ ಕೋರ್ಸ್‌ನ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಅನುಮೋದಿಸಬೇಕಾಗಿದ್ದು, ಇದಕ್ಕಾಗಿ ನಿಕಾಯಗಳ ಸಭೆಗಳು ನಡೆದಿರುತ್ತವೆ. ಮುಂದುವರೆದಂತೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲೂ ಸ್ನಾತಕ ಮತ್ತು ಸ್ನಾತಕೋತ್ತರ ಪಠ್ಯಕ್ರಮಗಳನ್ನು ಅನುಮೋದಿಸಬೇಕಾಗಿರುತ್ತದೆ ಜೊತೆಗೆ ಕೆಲವೊಂದು ಪ್ರಮುಖ ವಿಷಯಗಳನ್ನು ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಬೇಕಾಗಿದೆ ಎಂದು ಸಭೆಗೆ ತಿಳಿಸಿದರು ನಂತರ ಸಭೆಯನ್ನು ವಿದ್ಯುಕ್ತವಾಗಿ ಆರಂಭಿಸಲಾಯಿತು.

## ಪ್ರಾಧಿಕಾರಗಳ ವಿಭಾಗ

**2022:ಎಸಿ–4.03:** ದಿನಾಂಕ:31–03–2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ** : ಸದರಿ ನಡಾವಳಿಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ** : ಚರ್ಚೆಯ ನಂತರ ಸದರಿ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.04:** ದಿನಾಂಕ:15–06–2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ(ಘಟಿಕೋತ್ಸವ) ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ** : ಸದರಿ ನಡಾವಳಿಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:** : ಚರ್ಚೆಯ ನಂತರ ಸದರಿ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.05:** ದಿನಾಂಕ:19–09–2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಆನ್‌ಲೈನ್ ವಿಶೇಷ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ** : ಸದರಿ ನಡಾವಳಿಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ** : ಚರ್ಚೆಯ ನಂತರ ಸದರಿ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.06:** 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು.

**ನಿರ್ಣಯ** : ಚರ್ಚೆಯ ನಂತರ 2021–22ನೇ ಸಾಲಿನ ಸದರಿ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.

**2022:ಎಸಿ–4.07:** ದಿನಾಂಕ:–08–11–2022 ರಂದು ನಡೆದ ಕಲಾ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

ಪ್ರಾರಂಭದಲ್ಲಿ ವಿಶ್ವವಿದ್ಯಾಲಯದ NEP ನೋಡಲ್ ಅಧಿಕಾರಿಯಾಗಿರುವ ಪ್ರೊ. ಅಶ್ಫಕ್ ಅಹಮದ್‌ರವರು NEP ಪಠ್ಯಕ್ರಮ ಕುರಿತು ಸಭೆಗೆ ಸ್ಥೂಲವಾಗಿ ವಿವರಿಸಿದರು.

**ಚರ್ಚೆ** : ದಿನಾಂಕ:08–11–2022 ರಂದು ಜರುಗಿದ ಕಲಾ ನಿಕಾಯದ ಸಭೆಯ ನಡಾವಳಿಯ ಕುರಿತು ಕಲಾ ನಿಕಾಯದ ಡೀನರಾದ ಪ್ರೊ. ಎಸ್.ಎನ್. ಯೋಗೀಶ್‌ರವರು ಮಾತನಾಡಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಪರಿಣಿತರ ತಂಡದಿಂದ ರಚಿಸಲಾಗಿರುವ 3ನೇ ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪಠ್ಯಕ್ರಮವನ್ನು ಕಲಾ ನಿಕಾಯದ ಸಭೆ ಅನುಮೋದಿಸಿದ್ದು, ಇದರ ಜೊತೆಗೆ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭಾ ನಡಾವಳಿಗಳನ್ನು ಅನುಮೋದಿಸಬೇಕಾಗಿದೆ. ಆದ್ದರಿಂದ ಸದರಿ ಸಭಾ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಪ್ರೊ. ಪ್ರಶಾಂತ್ ನಾಯಕ್‌ರವರು ಸ್ನಾತಕ ಇತಿಹಾಸ ವಿಷಯದ ಪಠ್ಯಕ್ರಮದಲ್ಲಿ ಮಾಡಲಾಗಿರುವ ಅಲ್ಪಾ ಮಾರ್ಪಾಡನ್ನು ಒಪ್ಪಬಹುದಾಗಿದ್ದು, ಮುಂದಿನ ಶೈಕ್ಷಣಿಕ ಸಾಲಿನಿಂದ 5 ಮತ್ತು 6ನೇ ಸೆಮಿಸ್ಟರ್‌ನ NEP ಪದವಿ ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲವೆಂದು ತಿಳಿಸಿದರು.

**ನಿರ್ಣಯ** : ಚರ್ಚೆಯ ನಂತರ ಕಲಾ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.08:** ದಿನಾಂಕ:–08–11–2022 ರಂದು ನಡೆದ ವಾಣಿಜ್ಯ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ** : ದಿನಾಂಕ:08–11–2022 ರಂದು ಜರುಗಿದ ವಾಣಿಜ್ಯ ನಿಕಾಯದ ಸಭೆಯ ನಡಾವಳಿಯ ಕುರಿತು ವಾಣಿಜ್ಯ ನಿಕಾಯದ ಡೀನರಾದ ಪ್ರೊ. ವೆಂಕಟೇಶ್ ಎಸ್.ರವರು ಮಾತನಾಡಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಪರಿಣಿತರ ತಂಡದಿಂದ ರಚಿಸಲಾಗಿರುವ 3ನೇ ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪಠ್ಯಕ್ರಮವನ್ನು ವಾಣಿಜ್ಯ ನಿಕಾಯದ ಸಭೆ ಅನುಮೋದಿಸಿದ್ದು, ಇದರ ಜೊತೆಗೆ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭಾ ನಡಾವಳಿಗಳನ್ನು ಅನುಮೋದಿಸಬೇಕಾಗಿದೆ. ಆದ್ದರಿಂದ ಸದರಿ ಸಭಾ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ** : ಚರ್ಚೆಯ ನಂತರ ವಾಣಿಜ್ಯ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.09:** ದಿನಾಂಕ:–09–11–2022 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ** : ದಿನಾಂಕ:09–11–2022 ರಂದು ಜರುಗಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಯ ಕುರಿತು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಪರಿಣಿತರ ತಂಡದಿಂದ ರಚಿಸಲಾಗಿರುವ 3ನೇ ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪಠ್ಯಕ್ರಮವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆ ಅನುಮೋದಿಸಿದ್ದು, ಇದರ ಜೊತೆಗೆ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭಾ ನಡಾವಳಿಗಳನ್ನು ಅನುಮೋದಿಸಬೇಕಾಗಿದೆ. ಆದ್ದರಿಂದ ಸದರಿ ಸಭಾ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು. ಹೊಸ ಪಠ್ಯಕ್ರಮದ ಅನುಸಾರ ರಾಜ್ಯಾದ್ಯಂತ ಪದವಿ

ಕೋರ್ಸ್‌ಗಳಲ್ಲಿ ಏಕರೂಪದ ಪಠ್ಯಕ್ರಮ ಮತ್ತು ಪ್ರಶ್ನೆ ಪತ್ರಿಕೆ ಮಾದರಿಗಳನ್ನು ಅನುಸರಿಸಬೇಕಾಗುತ್ತದೆ ಎಂದು ಹೇಳಿದರು. 2021–22ನೇ ಸಾಲಿನಿಂದ ಎಂ.ಎಸ್ಸಿ. ಆಹಾರ ತಂತ್ರಜ್ಞಾನ ಕೋರ್ಸ್‌ನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿದ್ದು, ಈ ಕೋರ್ಸ್‌ಗೆ 30 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಈ ಕೋರ್ಸ್‌ನ ಪಠ್ಯಕ್ರಮವನ್ನು BOS ಮತ್ತು ನಿಕಾಯದ ಸಭೆ ಅನುಮೋದಿಸಿದ್ದು, ಈಗ ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ** : ಚರ್ಚೆಯ ನಂತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ–4.10:** ದಿನಾಂಕ:09–11–2022 ರಂದು ನಡೆದ ಶಿಕ್ಷಣ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ** : ದಿನಾಂಕ:09–11–2022 ರಂದು ಜರುಗಿದ ಶಿಕ್ಷಣ ನಿಕಾಯದ ಸಭೆಯ ನಡಾವಳಿಯ ಕುರಿತು ಶಿಕ್ಷಣ ನಿಕಾಯದ ಡೀನರಾದ ಪ್ರೊ. ಗೀತಾ.ಸಿ.ರವರು ಮಾತನಾಡಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಪರಿಣಿತರ ತಂಡದಿಂದ ರಚಿಸಲಾಗಿರುವ 3ನೇ ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪಠ್ಯಕ್ರಮವನ್ನು ಶಿಕ್ಷಣ ನಿಕಾಯದ ಸಭೆ ಅನುಮೋದಿಸಿದ್ದು, ಇದರ ಜೊತೆಗೆ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭಾ ನಡಾವಳಿಗಳನ್ನು ಅನುಮೋದಿಸಬೇಕಾಗಿದೆ. ಆದ್ದರಿಂದ ಸದರಿ ಸಭಾ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ** : ಚರ್ಚೆಯ ನಂತರ ಶಿಕ್ಷಣ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

ನಿಕಾಯಗಳ ನಡಾವಳಿ ಕುರಿತು ಮಾತನಾಡಿದ ಬಹುತೇಕ ಸದಸ್ಯರು ಹಾಗೂ ಶ್ರೀ ರವಿಕಿರಣ್, ಶ್ರೀ ಚಂದ್ರಶೇಖರ್ ಎಸ್. ಹಾಗೂ ಶ್ರೀ ರಮೇಶ್ ಹೆಗಡೆ ಎಂ.ಎ. ರವರು ಮಾತನಾಡಿ ನಿಕಾಯಗಳ ಸಭೆಗೆ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಬಹುತೇಕ ಅಧ್ಯಾಪಕರು ಗೈರು ಹಾಜರಾಗಿರುವುದು ಕಂಡುಬಂದಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿಯ ದೃಷ್ಟಿಯಿಂದ ಬಹಳ ಮಹತ್ತರವಾದ ಈ ಸಭೆಗೆ ಆಗಮಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕಾಗುತ್ತದೆ ಇಲ್ಲದಿದ್ದರೆ ಸಭೆಯ ಮಹತ್ವ ಇಲ್ಲದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು ಹಾಗೂ ಅಧ್ಯಾಪಕರುಗಳು ಗೈರು ಹಾಜರಾಗಿರುವುದು ತೀರಾ ಗಂಭೀರವಾದ ವಿಚಾರವಾಗಿರುವುದರಿಂದ ಹಾಜರಾಗದ ಅಧ್ಯಾಪಕರುಗಳಿಂದ ಸ್ಪಷ್ಟೀಕರಣ ಪಡೆಯಬೇಕೆಂದು ಸಭೆಗೆ ಒತ್ತಾಯಿಸಿದರು. ಅದಕ್ಕೆ ಪ್ರೊ. ಪ್ರಶಾಂತ್ ನಾಯಕ್‌ರವರು ಈಗ ರಜಾ ಅವಧಿಯಾಗಿರುವುದರಿಂದ ಸದಸ್ಯರ ಹಾಜರಾತಿ ಕಡಿಮೆಯಾಗಿದೆ ಎಂದರು. ಅದಕ್ಕೆ ರವಿಕಿರಣ್‌ರವರು ಮಾತನಾಡಿ ಈ ನಿಕಾಯದ ಸಭೆಯು ಅಧ್ಯಾಪಕರ ಕರ್ತವ್ಯದ ಭಾಗವಾಗಿರುವುದರಿಂದ ಸಭೆಯಲ್ಲಿ ಭಾಗವಹಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು. ನಂತರ ಮಾತನಾಡಿದ ಪ್ರೊ. ನರಸಿಂಹಮೂರ್ತಿ ಎಸ್.ಕೆ. ರವರು ವಿಶ್ವವಿದ್ಯಾಲಯದಲ್ಲಿ ಕಾರು ಮೈಲೇಜ್ ದರವನ್ನು ಕಡಿಮೆ ನೀಡುತ್ತಿರುವುದರಿಂದ ಸಭೆಗೆ ಬಹುತೇಕ ಬಾಹ್ಯ ಸದಸ್ಯರು ಆಗಮಿಸಿರುವುದಿಲ್ಲ ಹಾಗೂ ಮುಂದೆಯು ಆಗಮಿಸದೇ ಇರಬಹುದು ಎಂದರು. ಆಗ ಕುಲಸಚಿವರು ಮೈಲೇಜು ದರಗಳು ಸಿಂಡಿಕೇಟ್ ಸಭೆಯಲ್ಲಿ ಪರಿಷ್ಕೃತ ಹೊಂದಿರುತ್ತದೆ ಎಂದು ತಿಳಿಸಿದರು ಜೊತೆಗೆ ಶ್ರೀ ರವಿಕಿರಣ್‌ರವರು ಕಾರಣಗಳನ್ನು ಹೇಳಿ ತಪ್ಪಿಸಿಕೊಳ್ಳುವುದು ಸರಿಯಲ್ಲ ನಾವು ಕೆಲಸ ಕಾರ್ಯಗಳನ್ನು ಬಿಟ್ಟು ಸಭೆಗೆ ಬಂದಿಲ್ಲವೇ ಎಂದು ಪ್ರಶ್ನಿಸಿದರು.

ನಂತರ ಮಾತನಾಡಿದ ಕುಲಸಚಿವರು ಬಾಹ್ಯ ಅಧ್ಯಾಪಕರುಗಳನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ ಗೈರು ಹಾಜರಾದ ಬಗ್ಗೆ ಸೂಚನೆ ನೀಡಲಾಗುವುದು ಎಂದು ಹೇಳಿದರು.

ಚರ್ಚೆಯಲ್ಲಿ ಪಾಲ್ಗೊಂಡ ಮಾನ್ಯ ಸದಸ್ಯರಾದ ರವಿಕಿರಣ್‌ರವರು ಮಾತನಾಡಿ ವಿವಿಧ ಸ್ನಾತಕೋತ್ತರ ಮತ್ತು ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸೇವೆಯನ್ನು ಸಮರ್ಪಕವಾಗಿ ಲಭ್ಯವಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಬಳಸಿಕೊಳ್ಳಬೇಕೆಂದು ಹಾಗೂ ಕಾರ್ಯಭಾರಕ್ಕಿಂತ ಹೆಚ್ಚಿನ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಂಡಿರುವ ಸಂದರ್ಭಗಳು ಕಂಡುಬಂದಲ್ಲಿ ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಈ ಕುರಿತು ಮಾತನಾಡಿದ ಮತ್ತೊರ್ವ ಸದಸ್ಯರಾದ ಪ್ರೊ. ಆರ್ತೋಬ ನಾಯಕ್ ವೈ. ರವರು ಮಾತನಾಡಿ ಮುಂದಿನ ಶೈಕ್ಷಣಿಕ ಸಾಲಿನಿಂದ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವಾಗ ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು ಸೇವಾ ಜೇಷ್ಠತೆ ಮೇಲೆ ಪರಿಗಣಿಸಬೇಕೆಂದು ಕೋರಿದರು.

ಈ ಸಂಬಂಧವಾಗಿ ಉತ್ತರಿಸಿದ ಮಾನ್ಯ ಕುಲಪತಿಗಳು ಕರ್ನಾಟಕ ಸರ್ಕಾರ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಅತಿಥಿ ಉಪನ್ಯಾಸಕರ ನೇಮಕಾತಿ ಮತ್ತು ಮುಂದುವರಿಕೆ ಬಗ್ಗೆ ಕ್ರಮಕೈಗೊಳ್ಳಬೇಕಾಗುತ್ತದೆ ಹಾಗೂ ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರು ಹೊಂದಿರುವ ವಿದ್ಯಾರ್ಹತೆ (NET,KSET,PHD) ಅನುಭವ ಈ ಎಲ್ಲಾ ಮಾನದಂಡಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಚರ್ಚೆಯಲ್ಲಿ ಮಾತನಾಡಿದ ಸದಸ್ಯರಾದ ಶ್ರೀ ರವಿಕಿರಣ್‌ರವರು ರಾಜ್ಯ ಪಠ್ಯ ಪುಸ್ತಕ ಸಮಿತಿಯ ಶ್ರೀ ರೋಹಿತ್ ಚಕ್ರವರ್ತಿ ಅವರ ಪಠ್ಯವನ್ನು ವಿಶ್ವವಿದ್ಯಾಲಯ ಪದವಿ ಕೋರ್ಸ್‌ನಲ್ಲಿ ಅಳವಡಿಸುವ ಬಗ್ಗೆ BOS ಸದಸ್ಯರೊಬ್ಬರು ಪತ್ರಿಕಾ ಹೇಳಿಕೆ ನೀಡಿರುವ ಬಗ್ಗೆ ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು. ಇದೇ ವಿಷಯವಾಗಿ ಮಾತನಾಡಿದ ಸದಸ್ಯರಾದ ಪ್ರೊ. ಪ್ರಶಾಂತ್ ನಾಯಕ್‌ರವರು ಈ ವಿಷಯದ ಕುರಿತು ವಿಸ್ತಾರವಾಗಿ ಸಭೆಗೆ ಸ್ಪಷ್ಟೀಕರಣ ನೀಡಿದರು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜಪ್ಪರವರು ಮಾತನಾಡಿ ವಿವಿಧ ಪದವಿ ಕಾಲೇಜುಗಳಲ್ಲಿ ತಡವಾಗಿ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳು ಸೇರಿದಂತೆ ಶೈಕ್ಷಣಿಕ ಅವಧಿ ಅಂತ್ಯದಲ್ಲಿ ಪಠ್ಯಕ್ರಮವನ್ನು ಪೂರ್ಣಗೊಳಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ತರಾತುರಿಯಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಪಠ್ಯವನ್ನು ಅರ್ಥಮಾಡಿಕೊಳ್ಳಲು ತೊಂದರೆಯಾಗುತ್ತಿದ್ದು, ಈ ಶೈಕ್ಷಣಿಕ ಸಾಲಿನಿಂದಾದರೂ ನಿಗದಿತ ಅವಧಿಯಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ತರಗತಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ಸಂಬಂಧಪಟ್ಟ ಕಾಲೇಜಿನವರು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಡಾ. ಎ.ಟಿ. ಪದ್ಮೇಗೌಡರವರು ಅರ್ಥಶಾಸ್ತ್ರ ವಿಷಯದಲ್ಲಿ ಪದವಿ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗುತ್ತಿದ್ದು, ಈ ಕುರಿತು ಮಾನ್ಯ ಕುಲಪತಿಗಳು ಉನ್ನತ ಶಿಕ್ಷಣ ಪರಿಷತ್ ಉಪಧ್ಯಾಕ್ಷರಾದ ಪ್ರೊ. ತಿಮ್ಮೇಗೌಡರವರಿಗೆ ಪತ್ರ ಬರೆದು ಈ ವಿಷಯವನ್ನು ಅವರ ಗಮನಕ್ಕೆ ತರಬೇಕೆಂದು ಕೋರಿದರು.

ಇದೇ ಸಂದರ್ಭದಲ್ಲಿ ಸದಸ್ಯರಾದ ಪ್ರೊ. ನರಸಿಂಹಮೂರ್ತಿ ಎಸ್. ಕೆ. ಇವರು ಮಾತನಾಡಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಪದವಿ ತರಗತಿಳಲ್ಲಿ ಹೊಸ ಪಠ್ಯಕ್ರಮವನ್ನು ಜಾರಿಗೊಳಿಸಿದ ನಂತರ ಈ ಕುರಿತು ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಹಲವಾರು ಗೊಂದಲಗಳು ಮೂಡಿದ್ದು, ಇದರಿಂದ ಪದವಿ ತರಗತಿಗಳಿಗೆ ಪ್ರವೇಶಾತಿ ಹೊಂದಲು ವಿದ್ಯಾರ್ಥಿಗಳು ಹಿಂದೇಟು

ಹಾಕುತ್ತಿದ್ದು, ಕೇವಲ ಕಾಲೇಜುಗಳಲ್ಲಿ 60-70 ವಿದ್ಯಾರ್ಥಿಗಳು ಪ್ರವೇಶಾತಿ ಹೊಂದುತ್ತಿದ್ದು, ಇದು ಕಳವಳ ಕಾರ್ಯ ಅಂಶವಾಗಿರುವುದರಿಂದ ಈ ಕುರಿತು ಶಿಕ್ಷಣ ತಜ್ಞರು ಸರ್ಕಾರದ ಗಮನ ಸೆಳೆಯುವುದು ಸೂಕ್ತವಾಗಿರುತ್ತದೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಪ್ರೊ. ಆರ್ತೋಬ ನಾಯಕ್ ವೈ. ರವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮದ ಅನುಷ್ಠಾನದ ನಂತರ ಪದವಿ ತರಗತಿಗಳಲ್ಲಿ ವಿದ್ಯಾರ್ಥಿಗಳ ಉತ್ತೀರ್ಣತೆಯ ಶೇ ಪ್ರಮಾಣ 40 ಕ್ಕೆ ಕುಸಿದಿದೆ ಎಂದು ತಿಳಿಸಿದರು.

**2022:ಎಸಿ-4.11:** Statute for the Establishment of "Gamaka Adhyayana mathu Samshodhana Kendra"

**ಚರ್ಚೆ** : ಮಾನ್ಯ ಕುಲಸಚಿವರು ಮಾತನಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಶಿವಮೊಗ್ಗ ಸಮೀಪದ ಹೊಸಹಳ್ಳಿಯಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಗಮಕ ಕೇಂದ್ರದ ಸಹಯೋಗದೊಂದಿಗೆ ವಿಶ್ವವಿದ್ಯಾಲಯದಲ್ಲಿ ಗಮಕ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಪ್ರಾರಂಭಿಸಬೇಕಿದ್ದು, ಈ ಸಂಬಂಧ ಸ್ಥಾಯಿ ಸಮಿತಿಯಿಂದ ಪರಿನಿಯಮಾವಳಿಯನ್ನು ರಚಿಸಲಾಗಿದ್ದು, ಇದನ್ನು ವಿದ್ಯಾವಿಷಯಕ ಪರಿಷತ್‌ನ ಮಂಡನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ** : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.12:** Revised Statutes Governing The Institution Of Research Fellowship In P.G Department Of Kuvempu University.

**ಚರ್ಚೆ** : ಈ ಕುರಿತು ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರು ಸಂಶೋಧನಾ ವಿದ್ಯಾರ್ಥಿಗಳಿಗೆ ನಿಗಧಿತ ಅವಧಿಯಲ್ಲಿ ವಿದ್ಯಾರ್ಥಿವೇತನ ಮಂಜೂರಾಗುವಂತೆ ಕ್ರಮಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ಮಾತನಾಡಿದ ಮಾನ್ಯ ಕುಲಸಚಿವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ JRF ನಲ್ಲಿ ರೂ. 20 ಸಾವಿರ ಹಾಗೂ SRF ನಲ್ಲಿ ರೂ. 22 ಸಾವಿರಗಳನ್ನು ನಿಗಧಿಪಡಿಸುವ ಬಗ್ಗೆ ಹಾಗೂ ಹಿಂದೂಳಿದ ವರ್ಗಗಳ ಅಭ್ಯರ್ಥಿಗಳಿಗೆ ಫೆಲೋಶಿಪ್ ಮೊತ್ತವನ್ನು ರೂ. 6 ಸಾವಿರದಿಂದ ರೂ. 12 ಸಾವಿರ ನಿಗಧಿಪಡಿಸುವ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾಗಿದ್ದು, ವಿದ್ಯಾವಿಷಯಕ ಪರಿಷತ್‌ನಲ್ಲಿ ಅನುಮೋದನೆಯಾಗಬೇಕಾಗಿದೆ ಎಂದರು.

**ನಿರ್ಣಯ** : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು ಹಾಗೂ ಇದಕ್ಕೆ ಒಪ್ಪಿಗೆ ನೀಡಲಾಯಿತು.

**2022:ಎಸಿ-4.13:** Draft Statutes Governing the Establishment of Womens Research Center in Kuvempu University.

**ನಿರ್ಣಯ** : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.14:** Statutes Relating to Upgradation Of The Post Of Draftman as Senior Draftman personal to the incumbent employee of Kuvempu University.

**ನಿರ್ಣಯ** : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.15:** Draft Statutes governing the establishment of the Post Graduate Depatment of Studies and Research in *MICROBIOLOGY* at Jnana Sahyadri, Shankaraghatta

and also institution of teaching and non teaching posts in the said Department.

ನಿರ್ಣಯ : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.16 :** Draft Statutes governing the establishment of the Post Graduate Course of Studies and Research in *WILD LIFE MANAGEMENT* in the Post Graduate Department of *Applied Zoology* at University headquarters, Shankaraghatta and also institution of teaching and non teaching posts in the said Department.

ನಿರ್ಣಯ : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.17:** Draft Statutes governing the establishment of Department of Post Graduate Studies and Research in *TOURISM ADMINISTRATION.* at Jnana Sahyadri, Shankaraghatta and also institution of teaching and non teaching posts in the said Department.

ನಿರ್ಣಯ : ಚರ್ಚೆಯ ನಂತರ ಸದರಿ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-4.18:** Draft Statutes governing the establishment of the Post Graduate Department of Studies and Research in *BUSINESS ADMINISTRATION* at Jnana Sahyadri, Shankaraghatta and also institution of teaching and non teaching posts in the said Department.

ನಿರ್ಣಯ : ದಿನಾಂಕ:04-11-2022 ರಂದು ನಡೆದ ಸ್ಥಾಯಿ ಸಮಿತಿ ಸಭೆಯು ಸಿದ್ಧಪಡಿಸಿ ಅನುಮೋದಿಸಿದ ಸದರಿ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

**2022:ಎಸಿ-4.19:** Draft Statutes governing the establishment of the Post Graduate Department of Studies and Research in *PHYSICAL EDUCATION* at University headquarters, Shankaraghatta and also institution of teaching and non teaching posts in the said Department.

ನಿರ್ಣಯ : ದಿನಾಂಕ:04-11-2022 ರಂದು ನಡೆದ ಸ್ಥಾಯಿ ಸಮಿತಿ ಸಭೆಯು ಸಿದ್ಧಪಡಿಸಿ ಅನುಮೋದಿಸಿದ ಸದರಿ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

**2022:ಎಸಿ-4.20:** Scheme Governing the Regularization of Services of the Drivers working in Kuvempu University on Consolidated payments.

ನಿರ್ಣಯ : ದಿನಾಂಕ:04-11-2022 ರಂದು ನಡೆದ ಸ್ಥಾಯಿ ಸಮಿತಿ ಸಭೆಯು ಸಿದ್ಧಪಡಿಸಿ ಅನುಮೋದಿಸಿದ ಸದರಿ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

**2022:ಎಸಿ-4.21:** "ದಿವಂಗತ ಡಾ.ಅಕ್ಷತಾ ಯಾದವ್ ಡಿ.ಎಸ್.,ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿನಿ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಸದರಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆಗೆ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

2022:ಎಸಿ–4.22: "ಪ್ರೊ. ಕೆ.ವಸಂತಕುಮಾರ್ ಪೈ, ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಸದರಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆಗೆ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

2022:ಎಸಿ–4.23: ಅವಧಿ ಪೂರ್ಣಗೊಳಿಸಿದ (Double the Duration) ಡಿಪ್ಲೊಮಾ/ಸ್ನಾತಕ/ಸ್ನಾತಕೋತ್ತರ ಮತ್ತು ದೂರಶಿಕ್ಷಣ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

ನಿರ್ಣಯ : ಈ ಬಗ್ಗೆ ಸಭೆಯಲ್ಲಿ ಚರ್ಚಿಸಿದ ಸಭೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ವಿಶೇಷ ಸಂದರ್ಭವೆಂದು ಪರಿಗಣಿಸಿ Double the Duration ಸ್ಕೀಮ್‌ನಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಪ್ರೊ. ಪದ್ಮಮ್ಮ ಎಸ್.ರವರು ಮಾತನಾಡಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದ ಮೂಲಕ ಕೈಗೊಳ್ಳಲಾದ ಕಾರ್ಯಕ್ರಮಗಳ ಕುರಿತು ಸಭೆಗೆ ವಿವರಿಸಿದರು. ಜೊತೆಗೆ ಮಹಿಳಾ ಕೇಂದ್ರವು ಇನ್ನು ಹೆಚ್ಚಿನ ರೀತಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಹೆಚ್ಚುವರಿ ಅನುದಾನ, ಮೂಲಭೂತ ಸೌಕರ್ಯ ಹಾಗೂ ಅಗತ್ಯ ಸಿಬ್ಬಂದಿಗಳನ್ನು ಒದಗಿಸಬೇಕೆಂದು ಕೋರಿದರು.

ಈ ಕುರಿತು ಮಾತನಾಡಿದ ಮಾನ್ಯ ಕುಲಸಚಿವರು ಈ ಬಗ್ಗೆ ಮಹಳಾ ಕೇಂದ್ರದ ನಿರ್ದೇಶಕರು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಶ್ರೀ ವಿಷ್ಣುಮೂರ್ತಿ ಕೆ.ಎ. ರವರು ಮಾತನಾಡಿ ಯು.ಯು.ಸಿ.ಎಂ.ಎಸ್. ತಂತ್ರಜ್ಞಾನದ ಮೂಲಕ ಪದವಿ ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕಗಳನ್ನು ಸಂದಾಯ ಮಾಡುತ್ತಿದ್ದು, ಅದು ವಿಶ್ವವಿದ್ಯಾಲಯಕ್ಕೆ ನೇರವಾಗಿ ಜಮೆಯಾಗುತ್ತಿದ್ದು, ಈ ಶುಲ್ಕವು ಕಾಲೇಜಿಗೆ ಸಂದಾಯವಾಗಬೇಕಾದ ಶುಲ್ಕವನ್ನು ಒಳಗೊಂಡಿರುವುದರಿಂದ ಈ ಬಗ್ಗೆ ವಿಶ್ವವಿದ್ಯಾಲಯವು ಪರಿಶೀಲಿಸಿ ಕಾಲೇಜಿಗೆ ಪಾವತಿಯಾಗಬೇಕಾದ ಪ್ರವೇಶಾತಿ ಶುಲ್ಕದ ಮೊತ್ತವನ್ನು ಪಾವತಿಸುವ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಕೋರಿದರು. ಮುಂದುವರೆದಂತೆ ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಪರೀಕ್ಷಾ ಪರಿವೀಕ್ಷಕರನ್ನು (Squad) ನೇಮಿಸುವಾಗ ಅರ್ಹ ಹಾಗೂ ಸೂಕ್ತ ಅಧ್ಯಾಪಕರನ್ನು ನಿಯೋಜಿಸಬೇಕೆಂದು ಹಾಗೂ ಎಲ್ಲಾ ಅಧ್ಯಾಪಕರಿಗೂ ಸದರಿ ಕಾರ್ಯವನ್ನು ನಿರ್ವಹಿಸುವ ಅವಕಾಶವನ್ನು ಕಲ್ಪಿಸಿಕೊಡಲು ಒಂದು ಮಾನದಂಡವನ್ನು ರೂಪಿಸಬೇಕೆಂದು ಕುಲಸಚಿವ ಪರೀಕ್ಷಾಂಗರವನ್ನು ಕೋರಿದರು. ಇದರ ಜೊತೆಗೆ ಪರೀಕ್ಷಾ ಅಕ್ರಮಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಮೂಲಕ ವಿಧಿಸಲಾಗುವ ದಂಡದ ಸಂಬಂಧ ಕೆಲವು ವಿದ್ಯಾರ್ಥಿಗಳಿಗೆ ದಂಡ ವಿಧಿಸಿರುವುದು ಕಂಡುಬಂದಿದ್ದು ಇದರಿಂದಾಗಿ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದರಿಂದ ಈ ಬಗ್ಗೆ ಪರಿಶೀಲಿಸಿ ದಂಡ ಶುಲ್ಕ ವಿಧಿಸುವಾಗ ಸ್ವಲ್ಪ ರಿಯಾಯಿತಿಯನ್ನು ನೀಡಬೇಕೆಂದು ಸಭೆಗೆ ಕೋರಿದರು. ಈ ಅಭಿಪ್ರಾಯಕ್ಕೆ ಸದಸ್ಯರಾದ ಶ್ರೀ ನಟೇಶ್. ಎಸ್.ಎಂ., ಶ್ರೀಮತಿ ಭಾರತಿ, ಶ್ರೀಮತಿ ಗೀತಾಂಜಲಿ, ಶ್ರೀ ಹೆಚ್.ಎನ್. ಸುರೇಶ್‌ರವರು ಧ್ವನಿಗೂಡಿಸಿದರು.

ಈ ಬಗ್ಗೆ ಮಾತನಾಡಿದ ಕುಲಸಚಿವ ಪರೀಕ್ಷಾಂಗರವರು ಈ ಸಂಬಂಧ ಅಗತ್ಯ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಶ್ರೀಮತಿ ಮಮತಾ ಸಾಲಿಯವರು ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪ್ರವೇಶಾತಿ ಪ್ರಕ್ರಿಯೆಯಲ್ಲಿ ಸರ್ಕಾರದ ಮೀಸಲಾತಿ ನೀತಿಯನ್ವಯ ಸೀಟುಗಳನ್ನು ರೋಸ್ಟರ್ ಮೂಲಕ ವರ್ಗೀಕರಿಸಿ ಪ್ರವೇಶಾತಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಸಭೆಗೆ ಕೋರಿದರು.

ಇದಕ್ಕೆ ಉತ್ತರಿಸಿದ ಮಾನ್ಯ ಕುಲಸಚಿವರು ನಿಯಮಾನುಸಾರವೇ ಪಿ.ಹೆಚ್.ಡಿ. ಪ್ರವೇಶಾತಿ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ರಮೇಶ್ ಹೆಗಡೆ ಎಂ.ಎ. ರವರು ಮಾತನಾಡಿ ವಿದ್ಯಾವಿಷಯಕ ಪರಿಷತ್ ಸಭೆಯ ಪ್ರಾರಂಭದ ಸಮಯವನ್ನು ಬೆಳಿಗ್ಗೆ:11 ಗಂಟೆಯ ಬದಲಾಗಿ 10 ಗಂಟೆಗೆ ನಿಗಧಿಪಡಿಸಿದಲ್ಲಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಗಳನ್ನು ಕೈಗೊಳ್ಳಲು ಹೆಚ್ಚಿನ ಸಮಯವಕಾಶ ಸಿಗುವುದರಿಂದ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಕುಲಸಚಿವರನ್ನು ಕೋರಿದರು.

ಈ ಬಗ್ಗೆ ಕುಲಪತಿಗಳು ಹಾಗೂ ಕುಲಸಚಿವರು ಒಪ್ಪಿಗೆ ಸೂಚಿಸಿದರು.

## ಹಣಕಾಸು ವಿಭಾಗ

**2022:ಎಸಿ-4.24:** 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಅನುಮೋದನೆ ಕುರಿತು.

**ಚರ್ಚೆ** : ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಪ್ರೊ. ಆರ್ತೋಬ ನಾಯಕ್ ವೈ. ರವರು ಆಯವ್ಯಯದಲ್ಲಿ ಎಷ್ಟು ಕೊರತೆ ಇದೆ ಹಾಗೂ ಆದಾಯ ಮತ್ತು ವೆಚ್ಚಗಳ ಮಾಹಿತಿ ನೀಡಬೇಕೆಂದು ಸಭೆಗೆ ಕೋರಿದರು. ಒಂದು ವೇಳೆ ಅತಿಥಿ ಉಪನ್ಯಾಸಕರು ಹಾಗೂ ಏಜನ್ಸಿ ನೌಕರರು ಹೆಚ್ಚಿಗೆ ಇದ್ದರೆ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಬೇಕಾಗುತ್ತದೆ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಕುಮಾರೇಗೌಡರವರು ಮಾತನಾಡಿ ವಿಶ್ವವಿದ್ಯಾಲಯದ ಆಯವ್ಯಯ ಕುರಿತು ಹಣಕಾಸು ಅಧಿಕಾರಿಗಳು ವಿವರವಾದ ಮಾಹಿತಿಯನ್ನು ನೀಡಬೇಕೆಂದು ಕೇಳಿದರು. ನಂತರ ಆಯವ್ಯಯ ಕುರಿತು ಮಾನ್ಯ ಹಣಕಾಸು ಅಧಿಕಾರಿಗಳಾದ ಎಸ್. ರಾಮಕೃಷ್ಣರವರು ಸಭೆಗೆ ಮಾಹಿತಿ ನೀಡಿದರು.

**ನಿರ್ಣಯ** : ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

**2022:ಎಸಿ-4.25:** ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಂದಿನಿ ಮಿಲ್ಕ್ ಪಾರ್ಲರ್‌ನ್ನು ತೆರೆಯಲು 15x12 ಅಡಿ ಅಳತೆಯ ಖಾಲಿ ಜಾಗವನ್ನು ನೀಡುವ ಬಗ್ಗೆ.

**ಚರ್ಚೆ** : ಈ ಕುರಿತು ಮಾತನಾಡಿದ ಮಾನ್ಯ ಕುಲಸಚಿವರು ವಿಶ್ವವಿದ್ಯಾಲಯದ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಂದಿನಿ ಮಿಲ್ಕ್ ಪಾರ್ಲರ್‌ನ್ನು ತೆರೆಯುವ ಬಗ್ಗೆ 15x12 ಅಡಿ ಅಳತೆಯ ಖಾಲಿ ಜಾಗವನ್ನು ನೀಡುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ, ಮಾಚೇನಹಳ್ಳಿ, ಶಿವಮೊಗ್ಗ ಕೋರಿದ್ದು, ಈ ಬಗ್ಗೆ ವಿದ್ಯಾವಿಷಯಕ ಪರಿಷತ್‌ನ ಅಭಿಪ್ರಾಯವನ್ನು ಕೋರಿದರು.

**ನಿರ್ಣಯ** : ಚರ್ಚೆಯ ನಂತರ ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ, ಮಾಚೇನಹಳ್ಳಿ, ಶಿವಮೊಗ್ಗ ಇವರಿಗೆ ಸಹ್ಯಾದ್ರಿ ಕಾಲೇಜು ಕ್ಯಾಂಪಸ್‌ನಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಅನುಮತಿ ನೀಡುವ ಬಗ್ಗೆ ವಿದ್ಯಾವಿಷಯಕ ಪರಿಷತ್ ಸಭೆ ಅನುಮತಿ ನೀಡಿತು.

ಸದಸ್ಯರಾದ ಡಾ. ವಾಲ್ಮೀಕಿ ಆರ್.ಹೆಚ್. ರವರು ಮಾತನಾಡಿ ಯು.ಜಿ.ಸಿ. ನಿಯಮಾವಳಿ ಪ್ರಕಾರ ಇತರೆ ಅಧ್ಯಾಪಕರುಗಳಿಗೆ ನಿಗಧಿಪಡಿಸಲಾಗಿರುವ ವೇತನ ಶ್ರೇಣಿ, ವೃತ್ತಿ ಪದೋನ್ನತಿ ಮತ್ತು ವಯೋನಿವೃತ್ತಿ ಸೌಲಭ್ಯಗಳನ್ನು ಗ್ರಂಥಾಲಯ ಮತ್ತು ದೈಹಿಕ ಶಿಕ್ಷಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರು/ನಿರ್ದೇಶಕರಿಗೆ ಮಂಜೂರು ಮಾಡುವ ಕ್ರಮಕೈಗೊಳ್ಳಬೇಕೆಂದು ಕೋರಿದರು. ಇದಕ್ಕೆ ಸದಸ್ಯರಾದ ಶ್ರೀಮತಿ ಪದ್ಮಮ್ಮ ಎಸ್. ಹಾಗೂ ಡಾ. ಎನ್.ಡಿ. ವಿರೂಪಾಕ್ಷ ಇವರುಗಳು ಸಹ ಮತ ವ್ಯಕ್ತಪಡಿಸಿದರು. ಇದಕ್ಕೆ ಮಾನ್ಯ ಕುಲಸಚಿವರು

ಮಾತನಾಡಿ ಈ ಕುರಿತು ಇತರೆ ವಿಶ್ವವಿದ್ಯಾಲಯಗಳಲ್ಲಿ ಅನುಸರಿಸಲಾಗಿರುವ ಕ್ರಮಗಳ ಕುರಿತು ಮಾಹಿತಿಯನ್ನು ಪಡೆದುಕೊಂಡು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

**2022:ಎಸಿ–4.26: ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

**ಚರ್ಚೆ** : ಸದಸ್ಯರಾದ ಮನೋಜ್ ಸಲ್ದಾನಾರವರು ಮಾತನಾಡಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸ್ಥಳೀಯ ಉತ್ಪನ್ನಗಳಾದ ಶಿಕಾರಿಪುರ ಅಕ್ಕಿ ಮತ್ತು ಅಡಿಕೆ ಉತ್ಪನ್ನ ಹಾಗೂ ರಾಷ್ಟ್ರಕವಿ ಕುವೆಂಪು ಮತ್ತು ಸಾಗರದ ಹಸೆ ಚಿತ್ತಾರ ಚಿತ್ರಕಲೆಗೆ ಪೇಟೆಂಟ್ ಹೊಂದುವ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಕೋರಿದರು. ಈ ಬಗ್ಗೆ ಮಾತನಾಡಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ರಿಯಾಜ್ ಮಹಮೂದ್‌ರವರು Intellectual Property, Patents ಮತ್ತು Copy Rights ಗಳ ವಿಧಿ ವಿಧಾನಗಳ ಬಗ್ಗೆ ಸಭೆಗೆ ವಿವರಿಸಿದರು.

ಈ ಕುರಿತು ಮಾತನಾಡಿದ ಕುಲಸಚಿವರು ಈ ಕುರಿತು ಕುಲಂಕುಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ, ಮಾನ್ಯ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದರು.

ಸಹಿ/–

ಕುಲಪತಿಗಳು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**